## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1052

ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 18.12.2024

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ವಿವಿಧ ಸಾರಿಗೆ ಸಂಸ್ಥೆಗಳ ನೌಕರರಿಂದ ಮಾಹೆಯಾನ ಸಂಗ್ರಹಿಸಲಾಗುತ್ತಿರುವ PF ಮೊತ್ತದ ಹಣವೆಷ್ಟು; (ಕಳೆದ ಸಾಲಿನಿಂದ ಪ್ರಸ್ತುತವರೆಗೆ ವಿಂಗಡವಾರು ವಿವರ ಒದಗಿಸುವುದು)</td><td>
ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ನೌಕರರಿಂದ 2023-24ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿರುವ PF ಮೊತ್ತದ ವಿವರ ಈ ಕೆಳಗಿನಂತಿದೆ:-<br>
(ರೂ. ಕೋಟಿಗಳಲ್ಲಿ)
<table>
<tr><th>ಸಂಸ್ಥೆಗಳು</th><th>2023-2024</th><th>2024-2025</th><th>ಒಟ್ಟು</th></tr>
<tr><td>ಕ.ರಾ.ರ.ಸಾ. ನಿಗಮ</td><td>437.20</td><td>321.22</td><td>758.42</td></tr>
<tr><td>ಬೆಂ.ಮ.ಸಾ. ಸಂಸ್ಥೆ</td><td>384.14</td><td>233.71</td><td>617.85</td></tr>
<tr><td>ವಾ.ಕ.ರ.ಸಾ. ಸಂಸ್ಥೆ</td><td>285.85</td><td>203.73</td><td>489.58</td></tr>
<tr><td>ಕ.ಕ.ರ.ಸಾ. ನಿಗಮ</td><td>245.51</td><td>173.35</td><td>418.86</td></tr>
<tr><td></td><td></td><td>ಒಟ್ಟು</td><td>2284.71</td></tr>
</table>
ಮಾಹೆವಾರು ವಿವರವನ್ನು ಅನುಬಂಧ 'ಅ'ರಲ್ಲಿ ನೀಡಲಾಗಿದೆ.
</td></tr>
<tr><td>ಆ)</td><td>ಸದರಿ PF ಮೊತ್ತವನ್ನು PF ಸಂಸ್ಥೆಗೆ ಪ್ರತಿ ಮಾಹೆಯಾನ ಪಾವತಿಸಲಾಗಿದೆಯೇ; (ಮೊತ್ತ ಹಾಗೂ ದಿನಾಂಕದೊಂದಿಗೆ ಪ್ರಸ್ತುತವರೆಗೆ ಮಾಹಿತಿ ಒದಗಿಸುವುದು)</td><td>
ಮಾರ್ಚ್-2018 ಅಂತ್ಯಕ್ಕೆ ಕೇವಲ ರೂ14.78 ಕೋಟಿ ಮಾತ್ರ PF ಮೊತ್ತ ಪಾವತಿಯಾಗದೇ ಬಾಕಿ ಉಳಿದಿದ್ದು, ಏಪ್ರಿಲ್ -2018 ರಿಂದ ಮಾರ್ಚ್-2023 ರವರೆಗೆ ಹಾಗೂ ಏಪ್ರಿಲ್-2023 ರಿಂದ ನವಂಬರ್-2024 ರವರೆಗೆ ಪಾವತಿಯಾಗದೇ ಬಾಕಿ ಉಳಿದಿರುವ ಮೊತ್ತದ ವಿವರ ಈ ಕೆಳಕಂಡಂತಿದೆ.
<table>
<tr><th>ಸಂಸ್ಥೆಗಳು</th><th>ಮಾರ್ಚ್-2023 ರ ಅಂತ್ಯಕ್ಕೆ</th><th>ಏಪ್ರಿಲ್-2023ರಿಂದ ನವೆಂಬರ-24 ರವರೆಗೆ</th><th>ನವೆಂಬರ-24 ರ ಅಂತ್ಯಕ್ಕೆ</th></tr>
<tr><td>ಕ.ರಾ.ರ.ಸಾ. ನಿಗಮ</td><td>556.07</td><td>364.98</td><td>921.05</td></tr>
<tr><td>ಬೆಂ.ಮ.ಸಾ. ಸಂಸ್ಥೆ</td><td>81.12</td><td>708.39</td><td>789.51</td></tr>
<tr><td>ವಾ.ಕ.ರ.ಸಾ. ಸಂಸ್ಥೆ</td><td>575.06</td><td>535.92</td><td>1110.98</td></tr>
<tr><td>ಕ.ಕ.ರ.ಸಾ. ನಿಗಮ</td><td>18.11</td><td>154.81</td><td>172.92</td></tr>
<tr><td>ಒಟ್ಟು</td><td>1230.36</td><td>1764.10</td><td>2994.46</td></tr>
</table>
ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ PF ಮೊತ್ತವು ಬಾಕಿ ಉಳಿಯಲು ಪ್ರಮುಖ ಕಾರಣಗಳು;
</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|

- ಇಂಧನ ವೆಚ್ಚ ಹಾಗೂ ಕಾಲಿಕವಾಗಿ ಹೆಚ್ಚಳವಾಗುತ್ತಿರುವ ತುಟ್ಟಿ ಭತ್ಯೆ ಹೆಚ್ಚಳ ದಿಂದಾಗಿ ಕಾರ್ಯಾಚರಣೆ ವೆಚ್ಚದಲ್ಲಿ ಏರಿಕೆ ಉಂಟಾಗಿದ್ದು, ಇದಕ್ಕೆ ಅನುಗುಣವಾಗಿ ಪ್ರಯಾಣಿಕರ ದರದಲ್ಲಿ 2020 ರಿಂದ ಹಾಗೂ

ವಿದ್ಯಾರ್ಥಿಗಳ ರಿಯಾಯಿತಿ ಪಾಸ್ ದರದಲ್ಲಿ 2012 ರಿಂದ ಪರಿಷ್ಕರಣೆಯಾಗದೇ ಇರುವುದು.

- ದರ ಪರಿಷ್ಕರಣೆಗೂ ಹಿಂದೆ ಪ್ರತಿದಿನದ ಸರಾಸರಿ ಇಂಧನ ವೆಚ್ಚ ರೂ.9.16ಕೋಟಿಗಳಿದ್ದು, ಪ್ರಸ್ತುತ ಪ್ರತಿದಿನದ ಸರಾಸರಿ ಇಂಧನ ವೆಚ್ಚ ರೂ.13.21 ಕೋಟಿಗಳಾಗಿದ್ದು, ಪ್ರತಿದಿನದ ಇಂಧನ ವೆಚ್ಚದಲ್ಲಿ ರೂ.4.05 ಕೋಟಿಗಳ ಹೆಚ್ಚಳವಾಗಿರುತ್ತದೆ.
- ದಿನಾಂಕ 01-03-2023 ರಿಂದ ಜಾರಿಗೊಳಿಸಿರುವ ಸಿಬ್ಬಂದಿಗಳ ವೇತನ ಪರಿಷ್ಕರಣೆಯಿಂದಾಗಿ ಉಂಟಾಗಿರುವ ಮಾಹೆಯಾನ ಹೆಚ್ಚುವರಿ ವೆಚ್ಚ ರೂ.54.23 ಕೋಟಿಯನ್ನು ನಿಭಾಯಿಸಲು ವಿಶೇಷ ಅನುದಾನ ಬಿಡುಗಡೆಯಾಗದೇ ಇರುವುದು.
- ಕೋವಿಡ್ ಸಂದರ್ಭದಲ್ಲಿ ಸರ್ಕಾರವು ನಿವ್ವಳ ವೇತನ ಪಾವತಿಗಾಗಿ ಮಾತ್ರ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಇದರಿಂದ ಒಟ್ಟು ವೇತನ ಹಾಗೂ ನಿವ್ವಳ ವೇತನದ ವ್ಯತ್ಯಾಸದ ಮೊತ್ತವು ಕ್ರೋಢೀಕರಣವಾಗಿರುವುದು.

ಮೇಲ್ಕಂಡ ಕಾರಣಗಳಿಂದ ಪ್ರತಿ ತಿಂಗಳು ಸಂಗ್ರಹವಾಗುವ **PF** ಮೊತ್ತವನ್ನು **PF** ನ್ಯಾಸ ಮಂಡಳಿಗೆ ನಿಯಮಿತವಾಗಿ ಪಾವತಿಸಲು ಕಷ್ಟಸಾಧ್ಯವಾಗಿರುತ್ತದೆ.

2023-24 ಹಾಗೂ 2024-25 (ನವೆಂಬರ-24) ರವರೆಗೆ **PF** ಮೊತ್ತವನ್ನು ಪಾವತಿಸಿರುವ ವಿವರಗಳು ಕೆಳಗಿನಂತಿದೆ.

**(ರೂ. ಕೋಟಿಗಳಲ್ಲಿ)**

| | KSRTC | BMTC | NWKRTC | KKRTC | TOTAL |
|---|---|---|---|---|---|
| **ಪ್ರಾರಂಭಿಕ ಬಾಕಿ (ಕೋವಿಡ್ ಅವಧಿ)** | 480.42 | 175.31 | 464.99 | 0 | **1120.72** |
| 2023-24 ನೇ ಸಾಲಿನಲ್ಲಿ ಸಂಗ್ರಹವಾಗಿರುವ **PF** ಮೊತ್ತ | 437.20 | 376.46 | 285.83 | 240.69 | **1340.18** |
| 2023-24 ನೇ ಸಾಲಿನಲ್ಲಿ **PF** ನ್ಯಾಸ ಮಂಡಳಿಗೆ ಪಾವತಿಸಿರುವ ಮೊತ್ತ | 255.51 | 132.92 | 38.00 | 98.67 | **525.10** |
| 2023-24 ನೇ ಸಾಲಿನ ಅಂತ್ಯಕ್ಕೆ ಬಾಕಿ ಉಳಿದಿರುವ ಮೊತ್ತ | 662.11 | 418.85 | 712.82 | 142.02 | **1935.80** |
| 2024-25 ನೇ ಸಾಲಿನ ನವಂಬರ್-24 ರವರೆಗೆ ಸಂಗ್ರಹವಾಗಿರುವ **PF** ಮೊತ್ತ | 321.21 | 302.95 | 203.92 | 194.65 | **1022.73** |
| 2024-25 ನೇ ಸಾಲಿನಲ್ಲಿ ನವಂಬರ್-24 ರವರೆಗೆ **PF** ನ್ಯಾಸ ಮಂಡಳಿಗೆ ಪಾವತಿಸಿರುವ ಮೊತ್ತ | 277.00 | 10.00 | 53.73 | 180.92 | **521.65** |
| ನವಂಬರ್-24 ರ ಅಂತ್ಯಕ್ಕೆ ಬಾಕಿ ಉಳಿದಿರುವ **PF** ಮೊತ್ತ | **706.32** | **711.8** | **862.39** | **155.75** | **2436.26** |
| ನವಂಬರ್-24 ರ ಅಂತ್ಯಕ್ಕೆ ಬಾಕಿ ಉಳಿದಿರುವ ಬಡ್ಡಿ ಮೊತ್ತ | 214.73 | 77.71 | 248.59 | 17.17 | 558.20 |
| ನವಂಬರ್-24 ರ ಅಂತ್ಯಕ್ಕೆ ಒಟ್ಟು ಬಾಕಿ | **921.05** | **789.51** | **1110.98** | **172.92** | **2994.46** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | **PF** ಸಂಸ್ಥೆಗೆ ನೌಕರರ **PF** ಮೊತ್ತವನ್ನು ಕಟ್ಟುವಲ್ಲಿ ವಿಳಂಬವಾದರೆ ಸದರಿ ಸಂಸ್ಥೆಯು ಸಾರಿಗೆ ಸಂಸ್ಥೆಗಳ ಮೇಲೆ ಹಾಗೂ ನೌಕರರ ಮೇಲೆ ಯಾವ ರೀತಿ ಕ್ರಮಕೈಗೊಳ್ಳುತ್ತಿದೆ; (ವಿವರ ಒದಗಿಸುವುದು) | ಭವಿಷ್ಯ ನಿಧಿ ಕಾಯ್ದೆ ಸೆಕ್ಷನ್ **7Q** ಪ್ರಕಾರ ಸಾರಿಗೆ ಸಂಸ್ಥೆಗಳಿಗೆ ಭವಿಷ್ಯ ನಿಧಿ ಮೊತ್ತದ ವಿಳಂಬ ಪಾವತಿಗೆ ವಾರ್ಷಿಕವಾಗಿ ಶೇ.12 ರಂತೆ ಸರಳ ಬಡ್ಡಿಯನ್ನು ವಿಧಿಸಲಾಗುತ್ತದೆ. |
| ಈ) | **PF** ಮೊತ್ತ ಕಟ್ಟಲು ವಿಳಂಬವಾದಲ್ಲಿ ಸದರಿ ನೌಕರರಿಗೆ ಯಾವ ರ ೀತಿಯಲ್ಲಿ ನಷ್ಟವಾಗುತ್ತಿದೆ? (ವಿವರ ಒದಗಿಸುವುದು) | ಭವಿಷ್ಯ ನಿಧಿ ಮೊತ್ತದ ವಿಳಂಬ ಪಾವತಿ ಆಯಾ ಸಾರಿಗೆ ಸಂಸ್ಥೆಗಳಿಂದ ಭರಿಸಲಾಗುವುದರಿಂದ ನೌಕರರ ಮೇಲೆ ಯಾವುದೇ ಕ್ರಮ ವಹಿಸಲಾಗುವುದಿಲ್ಲ ಮತ್ತು ನೌಕರರುಗಳಿಗೆ ಯಾವುದೇ ರೀತಿ ನಷ್ಟವಾಗುವುದಿಲ್ಲ. |

ಸಂಖ್ಯೆ: ಟಿಡಿ 253 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು